ಓ ಎಸ್ ನಂಃ 54/2017
**ಡಿ ಡಬ್ಲ್ಯೂ ಃ 1**

**ದಿಃ 10.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಕೆ ಆರ್ ವಕೀಲರಿಂದಃ-**

ಛಾಪಾ ಕಾಗದವನ್ನು ತಾವರೆಕೆರೆಯ ವಿ ಎಸ್ ಎಸ್ ಸೊಸೈಟಿಯಿಂದ ಪಡೆದಿರುತ್ತೇನೆ. 100 ರೂಪಾಯಿನ 2 ಛಾಪಾ ಕಾಗದ ಮತ್ತು 50 ರೂಪಾಯಿನ 1 ಛಾಪಾ ಕಾಗದ ತಂದಿರುತ್ತೇನೆ. ಛಾಪಾ ಕಾಗದವನ್ನು ನಾನು ಲೋಕೇಶ್ ರವರ ಹೆಸರಿನಲ್ಲಿ ಪಡೆದಿರುವುದಿಲ್ಲ. ಛಾಪಾ ಕಾಗದವನ್ನು ನಾನು ಕ್ರಯದ ಕರಾರು ಪತ್ರಕ್ಕಾಗಿ ತಂದಿರುತ್ತೇನೆ. ಛಾಪಾ ಕಾಗದದ 3 ಹಾಳೆಗಳಲ್ಲಿ ಅಗ್ರಿಮೆಂಟ್ ಎಂದು ನಮೂದಾಗಿದೆ ಎಂದರೆ ಸರಿ. ನಿಡಿ 2 ರ ಕ್ರಯದ ಕರಾರು ಪತ್ರವನ್ನು ನಾನು ತಾವರೆಕೆರೆಯ ನೋಂದಣಾಧಿಕಾರಿಯ ಕಛೇರಿಯ ಬಳಿ ಟೈಪ್ ಮಾಡಿಸಿರುತ್ತೇನೆ. ನಿಡಿ 2 ಕ್ರಯದ ಕರಾರು ಪತ್ರ ನೋಂದಣಿಯಾಗಿರುವುದಿಲ್ಲ. ಕ್ರಯದ ಕರಾರು ಪತ್ರವನ್ನು ನೋಂದಣಿ ಮಾಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಡಿ 2 ಕ್ರಯದ ಕರಾರು ಪತ್ರದ ಬರವಣಿಗೆ ದಿಃ 18.07.2013 ರಂದು ಆಗಿರುತ್ತದೆ. ಆ ಸಮಯದಲ್ಲಿ ಮಂಜುಳ, ನಾಗಶ್ರೀ ಮತ್ತು ಜಗದೀಶ್ ರವರು ಹಾಜರಿದ್ದರು. ಸದರಿರವರನ್ನು ಹೊರತು ಪಡಿಸಿ ಸಿದ್ದಗಂಗಯ್ಯ ಮತ್ತು ನರಸಿಂಹಯ್ಯರವರು ಹಾಜರಿದ್ದರು. ಸಿದ್ದಗಂಗಯ್ಯ ಮತ್ತು ನರಸಿಂಹಯ್ಯರವರನ್ನು ಮಂಜುಳರವರು ಕರೆಸಿರುತ್ತಾರೆ. ನಿಡಿ 2 ಕ್ರಯದ ಕರಾರು ಪತ್ರದ ಬರವಣಿಗೆ 3 ಪುಟದಲ್ಲಿ ಆಗಿದೆ. ನಿಡಿ 2 ಕ್ರಯದ ಪತ್ರಕ್ಕೆ ನಾನು ಸಹಿ ಹಾಕಿರುತ್ತೇನೆ. ಸದರಿ ಕ್ರಯದ ಕರಾರು ಪತ್ರಕ್ಕೆ ನಾಗಶ್ರೀ, ಮಂಜುಳ ಮತ್ತು ಜಗದೀಶ್ ರವರು ಸಹಿಗಳನ್ನು ಹಾಕಿರುತ್ತಾರೆ. ನಿಡಿ 2 ರ ಪ್ರಕಾರ ಕ್ರಯದ ಪ್ರತಿಫಲವನ್ನು ರೂ. 18 ಲಕ್ಷ ಗೆ ನಿಗದಿ ಮಾಡಿರುತ್ತೇವೆ. ನಾನು ನಿಡಿ 2 ಕ್ರಯದ ಕರಾರು ಬಾಬ್ತು ರೂ. 11 1/2 ಲಕ್ಷ ಮುಂಗಡವಾಗಿ ನೀಡಿರುತ್ತೇನೆ. ನಿಡಿ 2 ರ ಕ್ರಯದ ಕರಾರು ಪತ್ರದಲ್ಲಿ ಮಂಜುಳರವರಿಗೆ ಆಗಿರುವ ಕ್ರಯ ಪತ್ರದ ವಿಚಾರನ್ನು ನಮೂದು ಮಾಡಿದ್ದೀರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಂಜುಳ ರವರು ಮೂಲ ಕ್ರಯ ಪತ್ರವನ್ನು ತಮಗೇನಾದರೂ ಕೊಟ್ಟಿದ್ದಾರ ಎಂದರೆ ಸಾಕ್ಷಿ ಸದರಿ ಕ್ರಯ ಪತ್ರವನ್ನು ತೋರಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ತಾವೇನಾದರೂ ನಿಡಿ 2 ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿದ್ದೀರ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ.

ನಿಡಿ 2 ರ ಕ್ರಯದ ಕರಾರು ಪತ್ರವನ್ನು ಎಷ್ಟು ವಿಸ್ತೀರ್ಣಕ್ಕಾಗಿ ಭರೆಯಿಸಿಕೊಂಡಿದ್ದೀರಿ ಎಂದರೆ

ಸಾಕ್ಷಿ 30 X 20 ಆಗಿರುತ್ತದೆ. ಸದರಿ ಜಾಗದಲ್ಲಿ ಮನೆ ಇದೆ. 30 X 20 ಪೂರ್ತ ಜಾಗದಲ್ಲಿ ಮನೆ ಇರುತ್ತದೆ. ಸದರಿ ಮನೆಯು ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಮಂಜಳರವರ ಹೆಸರಿನಲ್ಲಿದೆ. ನಿಡಿ 2 ಕ್ರಯದ ಕರಾರು ಪತ್ರದಲ್ಲಿ ರೂ. 8 ಲಕ್ಷ ಹಣವನ್ನು ನಗದು ರೂಪದಲ್ಲಿ 3 1/2 ಲಕ್ಷ ಹಣವನ್ನು 2 ಚೆಕ್ ಗಳ ಮೂಲಕ ನೀಡಿರುತ್ತೇನೆ. ದಿಃ 18.07.2013 ರಲ್ಲಿ ನಾನು ಚೆಕ್‌ಗಳನ್ನು ನೀಡಿರುತ್ತೇನೆ. ಉಳಿದ ರೂ. 8 ಲಕ್ಷ ಹಣ ತಮಗೆ ಹೇಗೆ ಬಂದಿದೆ ಎಂಬ ವಿಚಾರವನ್ನು ನಿಡಿ 2 ರ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯ ಹೆಸರಿಗೆ ಮೊದಲೇ ಕ್ರಯದ ಕರಾರು ಆಗಿರುವ ವಿಚಾರ ತಮಗೆ ಗೊತ್ತಿದ್ದರೂ ಸಹ ತಾವು ಮತ್ತು ಇತರೆ ಪ್ರತಿವಾದಿಗಳು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ.

ದಾವ ಸ್ವತ್ತಿಗೆ ಸಂಬಂಧಪಟ್ಟಂತೆ ದಿಃ 07.02.2014 ರಂದು ನೋಂದಣಿ ಮಾಡಿಸಿರುತ್ತೇವೆ. ಆ ಸಮಯದಲ್ಲಿ ನಾವು ಮಾರಾಟಗಾರರಿಗೆ ರೂ. 6,50,000/- ಹಣವನ್ನು ನೀಡಿರುತ್ತೇವೆ. ನಿಡಿ 1 ರ ಕ್ರಯ ಪತ್ರದಲ್ಲಿ ನಿಡಿ 2 ರ ಕ್ರಯದ ಕರಾರು ಪತ್ರದ ವಿಚಾರಗಳನ್ನು ನಮೂದು ಮಾಡಿರುತ್ತೇವೆ. ನಿಡಿ 1 ರ ಕ್ರಯ ಪತ್ರ ಲೋಕೇಶ್ ಮತ್ತು ಅರವಿಂದ್ ರವರಿಗೆ ನೋಂದಣಿ ಆಗಿರುತ್ತದೆ. ನಿಡಿ 1 ರ ಕ್ರಯ ಪತ್ರವನ್ನು ಇತರೆ ಪ್ರತಿವಾದಿಗಳ ಜೊತೆ ಸೇರಿ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಿಡಿ 1 ಮತ್ತು 2 ರ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**